<u>ಅಸಲು ದಾವಾ ಸಂಖ್ಯೆಃ **- 1/2021**</u> ಪಿ.ಡಬ್ಲ್ಯೂ**:-1**

ದಿನಾಂಕಃ **30-10-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾಗರಾಜಪ್ಪ ರವರ ತಂದೆಯ ಹೆಸರು ಪರಮೇಶ್ವರಪ್ಪ. ಪರಮೇಶ್ವರಪ್ಪರವರಿಗೆ **6** ಜನ ಗಂಡು ಮಕ್ಕಳು, ಒಬ್ಬರು ಹೆಣ್ಣು ಮಗಳು. ಬಸವರಾಜ, ರತ್ನಮ್ಮ, ನಾಗರಾಜಪ್ಪ ಶಾಂತರಾಜ್, ಯುವರಾಜ್, ಮುರುಗೇಶ್ ಮತ್ತು ಲಿಂಗರಾಜು. ಪರಮೇಶ್ವರಪ್ಪ ರವರ ಮಕ್ಕಳು 1993 ರಲ್ಲಿ ಭಾಗಶಃ ಮಾಡಿಕೊಂಡಿರುತ್ತಾರೆ. ಅದಿನಿಂದ ಅವರಿಗೆ ಬಂದಂತ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಆಗಿರುತ್ತದೆ. ಸರ್ವೆ ನಂ. 164 ರಲ್ಲಿ ನಾಗರಾಜಪ್ಪನಿಗೆ 3 ಎಕರೆ 5 ಗುಂಟೆ ಜಮೀನು, ಶಾಂತರಾಜ್ ರವರಿಗೆ ಸರ್ವೆ ನಂ. 164 ರಲ್ಲಿ ನಾಗರಾಜಪ್ಪನಿಗೆ 3 ಎಕರೆ ಜಮೀನು ಮತ್ತು ಮನೆ ಬಂದಿರುತ್ತದೆ ಎಂದರೆ ಸರಿ. ನಾಗರಾಜಪ್ಪ ಮತ್ತು ಶಾಂತರಾಜು ರವರು ಮಂಜುಳಾ ಮತ್ತು ರತ್ನಮ್ಮ ಎಂಬ ಅಕ್ಕ ತಂಗಿಯರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ನಾಗರಾಜಪ್ಪರವರಿಗೆ ಹಿಸ್ಸೆ ಮೂಲಕ ಆಸ್ತಿಗಳು ಬಂದಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ರತ್ನಮ್ಮ ಶಾಂತರಾಜರವರ ಹೆಂಡತಿ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು 2 ರವರು ನನ್ನ ತಾಯಿ ಮತ್ತು ತಂಗಿಯಲ್ಲ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ನಾಗರಾಜಪ್ಪರವರ ಜೊತೆಯಲ್ಲಿ ಬಂದಿದ್ದೇನೆ ಎಂದರೆ ಸರಿ. ಈ ದಾವೆಯನ್ನು ನಾಗರಾಜಪ್ಪರವರು ನನ್ನ ಮೂಲಕ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ಶಾಂತರಾಜು 2021 ನೇ ಇಸವಿಯಲ್ಲಿ ಮೃತರಾಗಿರುತ್ತಾರೆ. 1 ನೇ ಪ್ರತಿವಾದಿಯ ಗಂಡ ಶಾಂತರಾಜು ರವರು ತೀರಿಕೊಳ್ಳುವ ಪೂರ್ವದಲ್ಲಿ ಸುಮಾರು 6 ತಿಂಗಳ ಕಾಲ ಅವರಿಗೆ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿ. ಶಾಂತರಾಜು ರವರು ಮರಣ ಹೊಂದುವ ಪೂರ್ವದಲ್ಲಿ ಅವರನ್ನು ಚಿಕಿತ್ಸೆಗಾಗಿ ಮಂಗಳೂರು ಮತ್ತು ಮಣಿಪಾಲ್ ಆಸ್ಪತ್ರೆಯಲ್ಲಿ ಸುಮಾರು 3 ತಿಂಗಳ ಕಾಲ ದಾಖಲು ಮಾಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ಸುಮಾರು 5-6 ಲಕ್ಷ ರೂ ಸಾಲವನ್ನು ಮಾಡಿ ಶಾಂತರಾಜು ರವರಿಗೆ

ಚಿಕಿತ್ಸೆಯನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಮಣಿಪಾಲ್ ಮತ್ತು ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಎಷ್ಟು ಖರ್ಚು ಮಾಡಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ . ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುವಾಗ ನಾನು ಹೋಗಿ ನೋಡಿರುತ್ತೇನೆ. ನಾನು 1 ನೇ ಪ್ರತಿವಾದಿಯವರ ಕುಟುಂಬಕ್ಕೆ ಸೇರಿಲ್ಲದ ಕಾರಣ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಶಾಂತರಾಜಪ್ಪ ರವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಶಾಂತರಾಜಪ್ಪ ರವರು ಆಸ್ಪತ್ರೆಯಲ್ಲಿ ಸಾಕಾಷ್ಟು ಚಿಕಿತ್ಸೆಯನ್ನು ಪಡೆದುಕೊಂಡರು ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಾನು 1 ನೇ ಪ್ರತಿವಾದಿಯ ಕುಟುಂಬಕ್ಕೆ ಸೇರಿದ ಬಗ್ಗೆ ಕಂದಾಯ ಇಲಾಖೆಯಿಂದ ವಂಶವೃಕ್ಷವನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-10 ದಾಖಲೆಯನ್ನು ನಾನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-10 ದಾಖಲೆಯಲ್ಲಿ ಶಾಲಾ ದೃಢೀಕರಣ ಪತ್ರ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-10 ದಾಖಲೆಯನ್ನು ಶಾಲೆಯ ಮುಖ್ಯೋಪಾಧ್ಯಾಯರು ಬರೆದುಕೊಡಬೇಕೆಂದು ನಮೂದಾಗಿದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.